**ಸಾಕ್ಷಿಯನ್ನು ದಿಃ 08.11.2024 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

ಈ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಸಮನ್ಸ್ ಬಂದಿರುತ್ತದೆ. 8 ನೇ ಪ್ರತಿವಾದಿಯವರು ಸಾಕ್ಷ್ಯ ನುಡಿಯಲು ಕರೆದಿರುತ್ತಾರೆ. ನನ್ನ ಸ್ವಂತ ಮೈಸೂರು ತಾಲ್ಲೂಕು ರಮ್ಮನಹಳ್ಳಿ ಗ್ರಾಮ. 8 ನೇ ಪ್ರತಿವಾದಿಯವರದು ಯಾಂದಳ್ಳಿ ಗ್ರಾಮ ಎಂದರೆ ಸರಿ. 8 ನೇ ಪ್ರತಿವಾದಿ ನನಗೆ ಸಂಬಂಧಿಕರಲ್ಲ. ನನ್ನ ದೊಡ್ಡಪ್ಪ ಪತ್ರ ಬರಹಗಾರರಾಗಿದುದ ಅವರ ಸಹಿಯನ್ನು ಗುರುತಿಸಲು 8 ನೇ ಪ್ರತಿವಾದಿ ನನ್ನನ್ನು ಕರೆದಿರುತ್ತಾರೆ. ನಾಗಪ್ಪ ರವಗೆ ಮದುವೆ ಆಗಿ ಮಕ್ಕಳಿದ್ದಾರೆ. ಮುಂದುವರೆದು ಅವರ ಹೆಂಡತಿ 2004 ರಲ್ಲಿ ತೀರಿ ಹೋಗಿರುತ್ತಾರೆ. ಅವರ ಹೆಸರು ಜಯಮ್ಮ. ಸದರಿಯವರ ಮರಣ ಪ್ರಮಾಣ ಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ. ಅವರಿಗೆ ಇಬ್ಬರು ಗಂಡು ಮಕ್ಕಳು. ಸದರಿಯವರು ಮೃತ ಪಟ್ಟಿರುತ್ತಾರೆ. ಸದರಿಯವರು ತೀರಿ ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾಗಪ್ಪ ನನ್ನ ದೊಡ್ಡಪ್ಪನಾಗಿದ್ದು ನಾವು ಒಂದೇ ಕುಟುಂಬದವರಾಗಿದ್ದ ಕಾರಣ ಅವರ ಸಹಿಯನ್ನು ಗುರುತಿಸಬಲ್ಲೆ. ನಾವು ಒಂದೇ ಕುಟುಂಬದವರಾಗಿದ್ದು ನಮ್ಮಲ್ಲಿ ವಿಭಾಗ ಆದ ಬಗ್ಗೆ ವಿಭಾಗ ಪತ್ರ ಇರುವುದಿಲ್ಲ. ನನ್ನ ತಂದೆ ಶಿವಣ್ಣ, ನಾಗಪ್ಪ ರವರ ತಮ್ಮ. ಶಿವಣ್ಣ ಮತ್ತು ನಾಗಪ್ಪ ರವರ ನಡುವೆ ಯಾವುದೇ ಪಾಲು ಪರಿಕತ್ ಇರುವುದಿಲ್ಲ. ನಾನು ರಿಯಲ್ ಎಸ್ಟೇಟ್ ಕೆಲಸ ಮಾಡುತ್ತಿದ್ದೇನೆ. ನಾಗಪ್ಪರವರು ನನ್ನ ದೊಡ್ಡಪ್ಪ ಎಂದು ತೋರಿಸಲು ವಂಶವೃಕ್ಷ ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ದೊಡ್ಡಪ್ಪ ರಮ್ಮನಹಳ್ಳಿಯಲ್ಲಿ ವಾಸವಾಗಿದ್ದರು. ನನ್ನ ದೊಡ್ಡಪ್ಪ ಬಿಕಲಂ ಪರವಾನಗಿಯನ್ನು 1984 ರಲ್ಲಿ ಪಡೆದಿರುತ್ತಾರೆ. ಆ ಬಗ್ಗೆ ನನ್ನ ದೊಡ್ಡಪ್ಪ ತಿಳಿಸಿರುತ್ತಾರೆ. ನನ್ನ ದೊಡ್ಡಪ್ಪ ರವರು ಪರವಾನಗಿಯನ್ನು 1980 ರಲ್ಲಿ ಪಡೆದಿರುತ್ತಾರೆ ಎಂದರೆ ಸರಿ. ನಿಪಿ-35 ರಲ್ಲಿ ನಾಗಪ್ಪ ರವರು ಮಾಡಿರುವ ಸಹಿ ಯಾವ ಇಸವಿಯಲ್ಲಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. 1998 ರಲ್ಲಿ ನಾನು ಅಪ್ರಾಪ್ತ ವಯಸ್ಕನು ಎಂದರೆ ಸರಿ. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ.

ಆ ಸಮಯದಲ್ಲಿ ನಾನು ಅಪ್ರಾಪ್ತ ವಯಸ್ಕನಾದ ಕಾರಣ ನ್ನನ ದೊಡ್ಡಪ್ಪನವರ ಸಹಿ ಗುರುತಿಸಲು ಅಸಮರ್ಥನು ಎಂದರೆ ಸರಿಯಲ್ಲ. ನಾನು 8 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**</u>

ನಾಗಪ್ಪ ನನ್ನ ದೊಡ್ಡಪ್ಪ ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾರಕ್ಷಿಯು ಮರಣ ಪ್ರಮಾಣ ಪತ್ರ ಮತ್ತು ಆರ್ ಟಿ ಸಿ ಅನ್ನು ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತಾತರೆ. ಮರಣ ಪ್ರಮಾಣ ಪತ್ರಕ್ಕೂ, ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಮರಣ ಪತ್ರದಲ್ಲಿ ನನ್ನ ತಾತನ ಹೆಸರು ಇದೆ ಎಂದು ಉತ್ತರಿಸುತ್ತಾರೆ. ಮರಣ ಪತ್ರಮಾಣದಲ್ಲಿ ನಾಗಣಣ ಎಂದು ನಮೂದಾಗಿದೆ ಎಂದರೆಸರಿ. ನಿಡಿ–35 ರಲ್ಲಿ ಎಂ. ನಾಗಪ್ಪ ಎಂದು ನಮೂದಾಗಿದೆ ಎಂದರೆ ಸರಿ. ಆರ್ ಟಿ ಸಿ ಗಳಲ್ಲೂ ನಾಗಣ್ಣ ಎಂದು ನಮೂದಾಗಿದೆ ಎಂದರೆ ಸರಿ. ಎಂ. ನಾಗಪ್ಪ ಮತ್ತು ನಾಗಣ್ಣ ಇಬ್ಬರು ಬೇರೆ ಬೇರೆ ವ್ಯಕ್ತಿಗಳು ಎಂದರೆ ಸರಿಯಲ್ಲ. ಇಬ್ಬರು ಒಬ್ಬನೇ ವ್ಯಕ್ತಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಪಾನ್ ಕಾರ್ಡ್ , ಆರ್ ಟಿ ಸಿ ಈ ದಾವೆಗೆ ಸಂಬಂಧ ಪಟ್ಟಿದ್ದಲ್ಲ ಎಂದರೆ ಸರಿಯಲ್ಲ, ನಾನು ನಾಗಪ್ಪ ರವರ ಸಂಬಂಧಿಕ ನಲ್ಲದೇ ಇದ್ದರೂ 8 ನೇ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/–

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.